ಗಂಜಾಂ ನಾಗರಾಜ್, ಮೈಸೂರು
ಶಿವನಿಗೇಕೆ ಮೂರು ಕಣ್ಣು?



ಮೂಲೋಕದೊಡೆಯನಲ್ಲವೇ ಪ್ರತಿ ಲೊಕಾಲೋಕಕ್ಕೆ ಒಂದು ಲೋಚನ!

ಬಿ.ಆರ್. ಉಷಾ, ಶ್ರೀವಿದ್ಯಾನಗರ
ದೇಶಪ್ರೇಮಕ್ಕೆ ಸಮಾನವಾದ ಪ್ರೇಮ ಇನ್ನೊಂದಿಲ್ಲ ಅಲ್ಲವೆ?
ಇವೆ; ಮನುಕುಲಪ್ರೇಮ, ಪರಿಸರಪ್ರೇಮ.

ಗಣಪತಿ ಕಂಚಿಪಾಲ, ಯಲ್ಲಾಪುರ
ಹಣ ಕೂಡಿಟ್ಟರೆ ಭೋಗಕ್ಕೆ. ವಿದ್ಯೆ ಗಳಿಸಿದರೆ?
ವಿವೇಕದಿಂದ ಮಾಗಕ್ಕೆ, ಬಾಗಕ್ಕೆ.

ಆರ್. ಮಧುಸೂದನ್, ಹಾಸನ
ಹಿತ ನೀಡುವ ಹೆಣ್ಣಿನ ಸೌಂದರ್ಯಕ್ಕೆ ಇಲ್ಲದ ಬೆಲೆ ನಿರ್ಜೀವ ಚಿನ್ನಕ್ಕೆ ಏಕೆ?
ಕಷ್ಟವೆಂದು ಹೆಣ್ಣನ್ನು ಅಡ ಇಡಲು ಹೋದರೆ ಒದ್ದು ಒಳಗೆ ಹಾಕುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು
ಹೆಣ್ಣು ನೋಡಲು ಹೋದಾಗ ಉಪ್ಪಿಟ್ಟು, ಕಾಫಿಯನ್ನೇ ಕೊಡುತ್ತಾರೆ. ಏಕೆ ಸಾರ್?



ಹೆಣ್ಣಿನವರು ಗಂಡಿನ ಬಗ್ಗೆ 'ಕೆದಕುವ' (ಉಪ್ಪಿಟ್ಟು), ಗಂಡಿನವರು ಹೆಣ್ಣಿನಂದ 'ಹೀರುವ'(ಕಾಫಿ) ದ್ಯೋತಕಗಳವು.

ಎಸ್. ಮೋಹನ್, ಹಾಸನ
ದೇವರಂಥ ತಾಯಿತಂದೆಯರು ಪ್ರಸ್ತುತ ಪ್ರಪಂಚದಲ್ಲೂ ದೊರೆಯುವರೆ ರಾಮ್?
ಇದ್ದಾರಲ್ಲ! ಮಗು ಏಳುವ ಮುನ್ನ ಹೋಗಿ, ಮಲಗಿದಮೇಲೆ ಬರುವ ಕಣ್ಣಿಗೆ ಕಾಣದ ದೇವರುಗಳು.

ಪಿ.ಜೆ. ರಾಘವೇಂದ್ರ, ಮೈಸೂರು
ಬಾಣದಲ್ಲಿ ಶ್ರೇಷ್ಠ ರಾಮಬಾಣ. ಬಿಲ್ಲಿನಲ್ಲಿ?
ಅಸೆಂಬ್ಲಿ, ಪಾರ್ಲಿಮೆಂಟಿನ ಬಿಲ್ಲುಗಳು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಎಲ್ಲ ದೇವಾಲಯಗಳಲ್ಲಿ ದೇವರು ಪ್ರತ್ಯಕ್ಷನಾಗಿ ಪ್ರಸಾದ ಸ್ವೀಕರಿಸಿದರೆ ಹೇಗೆ ಸಾರ್?
ನೇರ್ಪು, ಚರ್ಪು ಎರಡೂ ಖೋತಾ ಆಗುತ್ತವೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಬಾತ್‌ರೂಮಲ್ಲೇ ಜಾರಿ ಬೀಳುವುದೇಕೆ?
ಒದ್ದೆಯಾದ ನೆಲ 'ಬೀಳುವಿಕೆ ಇಲ್ಲೇ ಜಾರಿಯಾಗಬೇಕು' ಎಂದು ಆಜ್ಞೆ ಮಾಡುತ್ತದಂತೆ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಅಮೆರಿಕ ಎಂದರೆ ಯುವಕ/ಯುವತಿಯರು ಹೋಗಿ ನೆಲೆಸಲು ಬಯಸುತ್ತಾರೆ. ಏಕೆ?
ನ್ಯೂ ಜರ್ಸಿ, ನ್ಯೂ ಬೆಡ್, ನ್ಯೂ ಫೋರ್ಡ್, ನ್ಯೂ ಹೋಪ್‌ಗಳ ಸೆಳೆತವಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ದೇವರು ಎಂದರೆ ಯಾರು?
ಜಗದ ಹೂ, ಹಣ್ಣು, ಪೂಜಾದ್ರವ್ಯ, ಮುಡಿಪುಗಳ ವ್ಯಾಪಾರಿಗಳು ಬದುಕಲು ಅವಶ್ಯವಾದ ಕಾಲ್ಪನಿಕ ಶಕ್ತಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮಾತು ಬೆಳ್ಳಿ. ಮೌನ ಬಂಗಾರ. ಹಾಡು?
ಬೆಳ್ಳಿಯ ಬಳುಕುವ ತಗಡು.

ಎನ್.ಜಿ. ಭಂಡಾರ್ಕರ್, ಹೊಸನಗರ
ಟೈಟಾಗಲು ಟಾನಿಕ್ ಕುಡಿದವನನ್ನು 'ಟೈಟಾನಿಕ್' ಅನ್ನೋಣವೇ?
ಗುಡ್. ಚೆನ್ನಾಗಿ 'ಸಿಂಕ್' ಆಗುತ್ತದೆ; ಹಾಗೆಯೇ ಭಂಡಾರಕ್ಕೆ ಕರ ಇಟ್ಟವರನ್ನು...

ಗೋ. ಮಹಾಲಿಂಗಪ್ಪ ಹುಲಕುಂದ
ಗುಣಕ್ಕೆ ಪ್ರಾಮುಖ್ಯತೆ ಕೊಟ್ಟು ಹಣವನ್ನು ಕಡೆಗಣಿಸಿ ಈಗ ಕಂಗಾಲಾಗಿದ್ದೇನೆ. ಏನು ಮಾಡಲಿ?
ನಿಮ್ಮ ಪ್ರಶ್ನೆಯಿಂದಲೇ ತಿಳಿದವರೆಂದರಿತೆ; ಗುರುವಾಗಿ; ಈ ಕಾಲದಲ್ಲಿ ಲಕ್ಷ್ಮಿ ಸರಸತಿಯ ಸಖಿ.

ರಾಜೀವ್ ಮಾಗಲ್, ಸಕಲೇಶಪುರ
ಬೆಂಗಳೂರು ನಗರಕ್ಕೆ ಸ್ವಚ್ಛ ನಗರ ಎಂದು ಪಟ್ಟ ಬಂದೇಬಿಟ್ಟರೆ ಗತಿ ಏನು?
ಆತಂಕ ಬಿಡಿ. ಹಾಗಾಗದಂತೆ ಹಗಲಿರುಳು ಶ್ರಮಿಸುವವರು ಅಲ್ಲಿ ಇದ್ದಾರೆ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಜ್, ಶಿವಮೊಗ್ಗ
ಸಾಲ ಮಾಡಿ ತುಪ್ಪ ತಿನ್ನುವುದಕ್ಕೂ, ಕದ್ದು ಹಣ್ಣು ತಿನ್ನುವುದಕ್ಕೂ ಇರುವ ವ್ಯತ್ಯಾಸವೇನು?
ಸಾಲ ಮಾಡಿ ತಿನ್ನುವುದು ರಾಜಮಾರ್ಗ; ಕದ್ದು ತಿನ್ನುವುದು ರಾಜಕಾರಣಿ ಮಾರ್ಗ.

ನಾಜ್ಯೋತಿ, ಹೂವಿನಹಡಗಲಿ
ಒಂದು ವೇಳೆ ಅಸುರರಿಗೂ ಅಮೃತ ದೊರಕಿದ್ದರೆ ಏನಾಗುತ್ತಿತ್ತು?
ಅದೇ ಅಪ್ಸರೆಯರನ್ನು ಕಂಡು ಬೇಸರವಾಗಿ ರಕ್ಕಸರು ಅಂದಿನ ಡ್ರಗ್ ಆದ ಹಾಲಾಹಲವನ್ನು ಬೇಡುತ್ತಿದ್ದರು.

ಎಲ್. ಸುಮಂತ್, ಮಂಗನಹಳ್ಳಿ
ಕಾಲಚಕ್ರವನ್ನು ನಡೆಸುತ್ತಿರುವ ಇಂಧನ ಯಾವುದಿರಬಹುದು ರಾಮ್?
ಬಾಹ್ಯಾಕಾಶ ವಸ್ತುಗಳ ಪರಸ್ಪರ ಸೆಳೆತ. ಅದು ತಪ್ಪಿದರೆ ಕಾಲವೂ ಕಾಲವಾಗುತ್ತದೆ.

ಅನುಪಮಾ ಮುರುಳಿ, ಊರಿಲ್ಲ
ಕಾಲ್ಗೆಜ್ಜೆಯ ಘಲ್ ಘಲ್ ನಾದಕ್ಕೂ, ಕೈಬಳೆಯ ಕಿಂಕಿಣಿ ಗಾನಕ್ಕೂ ಇರುವ ವ್ಯತ್ಯಾಸವೇನು ರಾಮ್?



'ಘಲ್' ಕಲೆಯ ಹೊನಲ್; 'ಕಿಂಕಿಣಿ' ಮಮತೆಸರಸಗಳ ಇನಿದನಿ.

ವಿ.ಎಸ್. ರಾಮಮೂರ್ತಿ, ಕಂದವಾರ
ಬಹುತೇಕ ಎಲ್ಲರೂ 'ಏನೂ ಇಲ್ಲ' ಎಂದು ಹೇಳಿ, ಗಂಟೆಗಟ್ಟಲೆ ಮಾತನಾಡುವರಲ್ಲಾ....?
ಅಷ್ಟೂ ಮಾತುಗಳು 'ಏನೂ ಇಲ್ಲ'ದಷ್ಟೇ ಹುರುಳುಳ್ಳವು ಎಂದು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನಿಮಗೆ ಪ್ರಶ್ನೆ ಕಳುಹಿಸುವವರೆಲ್ಲ ಯಕ್ಷ ಯಕ್ಷಿಯರೆ?
ದಕ್ಷದಕ್ಷೆಯರು ಎಂಬುದಂತೂ ಖಾತ್ರಿ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in